ಯಾರೊಬ್ಬರ ಮುಖದಲ್ಲೂ ಅಸಹನೆಯ ಛಾಯೆ ಕಾಣಿಸಲಿಲ್ಲ. ಊರಲ್ಲಿದ್ದ ಆ ದಿನಗಳಲ್ಲಿ ನನಗೂ ಈ ಟೆಂಪೊ ಪ್ರಯಾಣ ಪ್ರಯಾಸವಾಗಿ ಕಾಣುತ್ತಿರಲಿಲ್ಲ. ಆದರೆ, ಈಗ ಬೆಂಗಳೂರಿನ ವೇಗದ ಬದುಕಿಗೆ ಹೊಂದಿಕೊಂಡ ಮೇಲೆ ಊರಿನ ಸಂಚಾರ ಹಿಂಸೆ ಅನಿಸುತ್ತಿದೆ!

ನೇರ ಎದುರೇ ಕೂತಿದ್ದ ಸ್ಫುರದ್ರೂಪಿ ಯುವಕನೊಬ್ಬ ನನ್ನತ್ತ ನೋಡಿ ಮುಗುಳ್ನಕ್ಕ. ನೀನ್ಯಾರು ಅಂತ ಗೊತ್ತಾಗಲಿಲ್ಲ ಎಂಬಂತಿದ್ದ ನನ್ನ ಮುಖಭಾವ ನೋಡಿ, ''ತೂ ಸತೀಶ್ ಅಣ್ಣಾ ನೈ ವೆ?'' ಎಂದನಾತ ಕೊಂಕಣಿಯಲ್ಲಿ. ''ಹೌದು. ನೀನು?'' ಎಂದೆ ನಾನು. ''ಆರ್ ಯು ನಾಟ್ ರೆಕಗ್ನಾಯ್ಸ್ ಮಿ? ಎಕ್ಚುಲಿ ನನಗೂ ಮೊದಲು ನಿಮ್ಮ ಗುರುತು ಹತ್ತಲಿಲ್ಲ. ಬಾಲ್ಯದಲ್ಲಿ ನಿಮ್ಮನ್ನು ನೋಡಿದ ನೆನಪು'' ಎನ್ನುತ್ತ, ತಾನು ವಿಠೋಬ ಪೈ ಅವರ ಮಗ ಎಂದು ಪರಿಚಯಿಸಿಕೊಂಡ.

''ಓಹ್ ನೀನಾ'' ಎಂದು ಅಚ್ಚರಿ ವ್ಯಕ್ತಪಡಿಸಿದೆ. ಇನ್ನಷ್ಟು ಮಾತನಾಡಬೇಕು ಎನ್ನುವಷ್ಟರಲ್ಲಿ ಇಬ್ಬರು ಪ್ರಯಾಣಿಕರು ಇಳಿದು ಹೋದ ಕಾರಣ ಆತ ಕಿಟಕಿ ಕಡೆ ಹೋಗಿ ಕೂತದ್ದರಿಂದ ನಮ್ಮ ಮಾತಿನ ಮುಂದುವರಿಕೆಗೆ ತಡೆ ಬಿತ್ತು. ಚೋಟುದ್ದ ಇದ್ದ ಪೋರ ಇಷ್ಟು ದೊಡ್ಡವನಾಗಿಬಿಟ್ಟಿದ್ದಾನಲ್ಲ ಅಂದುಕೊಂಡೆ. 'ಆಗ ಹೈಸ್ಕೂಲ್‌ಗೆ ಹೋಗುತ್ತಿದ್ದ ನೀನೀಗ ಮಧ್ಯ ವಯಸ್ಕನಾಗಿ ಬಿಟ್ಟೆಲ್ಲವಾ' ಎಂದು ನನಗೆ ನಾನೇ ಪ್ರಶ್ನಿಸಿಕೊಂಡಾಗ ಮುಖದಲ್ಲಿ ಕಿರುನಗೆ ಮೂಡಿತು. ಬಾಲ್ಯದಲ್ಲಿ ಕಂಡ ವಿಠೋಬ ಪೈ ಅವರ ಮುಖ ಕಣ್ಣೆದುರು ಬಂತು.

ಗಾಂಧಿಪುರದಲ್ಲಿ ಅವರು ಮಾಡಿದ ಪ್ರಯೋಗಗಳು ಒಂದೇ ಎರಡೆ? ಕಡುಬಡತನದಲ್ಲಿ ಬೆಂದು ಈ ಹಳ್ಳಿಯಿಂದ ಬಾಲ್ಯದಲ್ಲೇ ಮುಂಬಯಿಗೆ ಗುಳೆ ಹೋದವರವರು. ಅಲ್ಲಿ ಸಣ್ಣಪುಟ್ಟ ಚಾಕರಿ ಮಾಡುತ್ತ ಸಂಜೆ ತರಗತಿಯಲ್ಲಿ ಓದುತ್ತ 10ನೇ ತರಗತಿ ಪಾಸು ಮಾಡಿ, ಬ್ಯಾಂಕೊಂದರಲ್ಲಿ ಉದ್ಯೋಗ ಗಿಟ್ಟಿಸಿದ್ದರು. ಆ ಬ್ಯಾಂಕಲ್ಲೇ ಕೆಲಸ ಮಾಡುತ್ತಿದ್ದ ಮರಾಠಿ ಹುಡುಗಿಯನ್ನು ಮದುವೆಯಾಗಿ ನೆಮ್ಮದಿಯಾಗಿದ್ದರು.

ಇದ್ದಕ್ಕಿದ್ದಂತೆ ಅವರಿಗೆ ಅದೇನನ್ನಿಸಿತೋ... ಉದ್ಯೋಗ ತೊರೆದು, ಹೆಂಡತಿಯ ಕೆಲಸವನ್ನೂ ಬಿಡಿಸಿ, ಅಲ್ಲಿಯವರೆಗೆ ಗಳಿಸಿದ ಅಷ್ಟೂ ಸಂಪಾದನೆಯನ್ನು ಕಟ್ಟಿಕೊಂಡು ಊರಿಗೆ ಮರಳಿದರು.

ಎಪ್ಪತ್ತರ ದಶಕದ ಆರಂಭ ಅದು. ವಿಠೋಬ ಪೈಯವರು ಊರಲ್ಲಿ ಶುರು ಮಾಡಿದ್ದು ಬಟ್ಟೆ ಸ್ಕೀಮ್. ಊರಿನ ಮನೆಮನೆಗೆ ಹೋಗಿ, ''ನಿಮ್ಮನೆಯ ಹೆಣ್ಣುಮಕ್ಕಳು ಇನ್ನೆಷ್ಟು ದಿನ ಸೀರೆಯನ್ನೇ ಉಡುತ್ತಿರಬೇಕು? ಲಂಗ ದಾವಣಿಯನ್ನೇ ಹಾಕಿಕೊಂಡಿರಬೇಕು? ನಿಮ್ಮನೆಯ ಹುಡುಗರು ಪ್ಯಾಂಟ್ ಹಾಕೋದು ಯಾವಾಗ? ತಿಂಗಳಲ್ಲಿ ಐದೇ ರೂಪಾಯಿ ಕಟ್ಟಿ. ಆರು ತಿಂಗಳ ಬಳಿಕ ನಿಮಗೆ ಹೊಸ ಮಾದರಿಯ ರೆಡಿಮೇಡ್ ಬಟ್ಟೆ ಕೊಡುತ್ತೇನೆ. ಪ್ರತಿ ತಿಂಗಳೂ ಲಾಟರಿ ಬೇರೆ ಇರ್ತದೆ. ಲಾಟರಿ ತಾಗಿದವರಿಗೆ ಮುಂದಿನ ತಿಂಗಳ ಕಂತನ್ನು ಕಟ್ಟಿಸಿಕೊಳ್ಳದೆ ಬಟ್ಟೆ ಕೊಡುತ್ತೇನೆ'' ಎಂದು ಪ್ರಚಾರ ಮಾಡಿದರು.

ಪೈ ಅವರ ಪತ್ನಿಯೂ ಸೈಕಲ್ ಮೇಲೆ ಊರೂರು ಸುತ್ತಿದರು. ಹೆಣ್ಣುಮಗಳೊಬ್ಬಳು ಸೈಕಲ್ ಓಡಿಸುವುದೇ ವಿಶ್ವದ ಪರಮ ಅಚ್ಚರಿ ಎಂಬಂತೆ ಊರ ಜನ ತಂಡೋಪತಂಡವಾಗಿ ರಸ್ತೆ ಬದಿಯಲ್ಲಿ ನಿಂತು ಬಾಯಿ ಬಿಟ್ಟುಕೊಂಡು ನೋಡಿದರೆ ಹೊರತು, ಇಸ್ಸಿಸ್ಸಿ ನಮ್ಮನೆ ಹುಡುಗಿಯರು ಅದೇನೋ 'ಚೂರಿದಾರಾ' ಹಾಕುದುಂಟಾ ಎಂದು ತಲೆ ತಪ್ಪಿಸಿಕೊಂಡರು. ವರ್ಷವಿಡೀ ಮಾಡಿದ ಪೈ ದಂಪತಿಯ ಶ್ರಮ ಪಾಳು ಗುಡ್ಡದ ಮೇಲೆ ನೀರು ಸುರಿದಂತಾಯಿತು. ಮುಂಬಯಿಯಿಂದ ತರಿಸಿದ ಥರಹೇವಾರಿ ಹೊಸ ಮಾಡೆಲ್ ಬಟ್ಟೆಗಳೆಲ್ಲ ಧೂಳು ಹಿಡಿದವು...

ಮೊದಲ ಪ್ರಯೋಗ ದಾರುಣವಾಗಿ ವಿಫಲಗೊಂಡರೂ ಎದೆಗುಂದದ ಪೈ ಮಾಮ್ ಸಣ್ಣ ಕೈಗಾರಿಕೆ ಸ್ಥಾಪಿಸಿ ಹಪ್ಪಳ, ಉಪ್ಪಿನಕಾಯಿ, ಕಷಾಯದ ಪುಡಿ ತಯಾರಿಕೆಗಿಳಿದರು. ನೋಡ್ತಾ ಇರಿ, ಈ ಊರಿನ